## 65. ರಾಜ್ಯ ವಿಪತ್ತು ನಿಧಿಯಿಂದ ತ್ರಿಸೂತ್ರ

ರಾಜ್ಯ ವಿಪತ್ತು ನಿಧಿಯಿಂದ ಸರ್ಕಾರ ಮೂರು ರೀತಿಯಲ್ಲಿ ಹಣ ಬಳಸಿಕೊಳ್ಳುತ್ತಿದ್ದು, ಈವರೆಗೆ ಬರೋಬ್ಬರಿ ರೂ.190 ಕೋಟಿ ವೆಚ್ಚ ಮಾಡಿದೆ. ಒಟ್ಟು ರೂ.255 ಕೋಟಿ ವೆಚ್ಚಕ್ಕೆ ಅನುಮೋದನೆಯನ್ನು ನೀಡಿದೆ.

ಪುನರ್ವಸತಿ ಕೇಂದ್ರ ನಿರ್ವಹಣೆ, ಕ್ವಾರಂಟೈನ್–ಕಂಟೈನ್ಮೆಂಟ್ ಝೋನ್ ವ್ಯವಸ್ಥೆಗೆ ಹಾಗೂ ಕೋವಿಡ್ ಆಸ್ಪತ್ರೆಗಳ ಸೌಲಭ್ಯಗಳ ಉನ್ನತೀಕರಣಕ್ಕೆ ರಾಜ್ಯ ವಿಪತ್ತು ನಿಧಿ ಹಣವನ್ನು ಆದ್ಯತೆ ಮೇಲೆ ಬಳಸಿಕೊಳ್ಳಲಾಗುತ್ತಿದೆ.

ಕೊರೋನಾ ಸೋಂಕು ಹಿನ್ನೆಲೆಯಲ್ಲಿ ಈ 3 ಸಂಗತಿಗಳು ಬಹಳ ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ಸಂಕಷ್ಟದಲ್ಲಿ ಇರುವವರು ಉಪವಾಸ ಬೀಳದಂತೆ ಊಟ–ದಿನಸಿ ವಿತರಿಸುವುದು, ಕ್ವಾರಂಟೈನ್ ಮಾಡಬೇಕಾದವರಿಗೆ ಅಗತ್ಯ ಸೌಲಭ್ಯ ಕಲ್ಪಿಸುವುದು, ಕಂಟೈನ್‌ಮೆಂಟ್ ವ್ಯವಸ್ಥೆ ಹಾಗೂ ಆಸ್ಪತ್ರೆಗಳಲ್ಲಿ ಅಗತ್ಯ ಪರಿಕರ ಖರೀದಿಸುವುದು ಮುಖ್ಯ. ಈ ನಿಟ್ಟಿನಲ್ಲಿ ಹಣ ಬಳಸಿಕೊಳ್ಳಲಾಗಿದೆ ಎಂಬುದು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಮಾಹಿತಿ ನೀಡಿದೆ.

ಕೊರೋನಾ ಆರಂಭದಿಂದ ಈವರೆಗೆ ರಾಜ್ಯದಾದ್ಯಂತ 4303 ಪರಿಹಾರ ಕೇಂದ್ರಗಳನ್ನು ಗುರುತಿಸಲಾಗಿತ್ತು. ಪ್ರಸ್ತುತ 3900 ಪರಿಹಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರದ ಕಡೆಯಿಂದಲೇ ಪರಿಹಾರ ಕೇಂದ್ರ ಆರಂಭಿಸಲು ಉದ್ದೇಶಿಸಲಾಗಿದ್ದರೂ, ವಲಸೆ ಕಾರ್ಮಿಕರು ತಾವಿದ್ದ ಸ್ಥಳ ಬಿಟ್ಟು ಬರಲಿಲ್ಲ. ಬಹುತೇಕ ಕಡೆ ಅವರಿದ್ದ ಕಡೆಗಳಲ್ಲಿ ಸಿದ್ಧ ಆಹಾರ ಅಥವಾ ದಿನಸಿ ಒದಗಿಸಲಾಗಿದೆ.

ಎರಡನೇ ಭಾಗವಾಗಿ ಕ್ವಾರಂಟೈನ್ ಕೇಂದ್ರಗಳಿಗೆ ಮತ್ತು ಕಂಟೈನ್ಮೆಂಟ್ ಪ್ರದೇಶಗಳ ನಿರ್ವಹಣೆಗೆ ವೆಚ್ಚ ಮಾಡಲು ಬಿಬಿಎಂಪಿ ಸೇರಿ ಜಿಲ್ಲಾಧಿಕಾರಿಗಳಿಗೆ ಅವಕಾಶ ನೀಡಲಾಗಿದೆ. ಬಿಬಿಎಂಪಿಯೊಂದಕ್ಕೆ ರೂ.25 ಕೋಟಿ ನೀಡಲಾಗಿದೆ. ಜೊತೆಗೆ ಪೊಲೀಸ್ ಇಲಾಖೆಗೆ ರೂ.5 ಕೋಟಿ, ಬಂಧೀಖಾನೆ ನಿರ್ವಹಣೆಗಾಗಿ ರೂ. 2 ಕೋಟಿ ನೀಡಲಾಗಿದೆ. ಒಟ್ಟಾರೆ ಜಿಲ್ಲಾಧಿಕಾರಿಗಳಿಗೆ ರೂ.255 ಕೋಟಿ ನೀಡಿದ್ದು ರೂ.155 ಕೋಟಿ ವೆಚ್ಚ ಮಾಡಿದ್ದಾರೆ.

**ರೂ.1054 ಕೋಟಿ ಮೀಸಲು:** ಪ್ರಮುಖವಾಗಿ ಕೊರೋನಾ ರೋಗಿಗಳಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಗಳ ಸೌಲಭ್ಯ ಹೆಚ್ಚಿಸುವ ಉದ್ದೇಶದಿಂದ ಪರಿಕರ ಖರೀದಿ, ಥರ್ಮಲ್ ಸ್ಕ್ಯಾನಿಂಗ್, ಪಿಪಿಇ ಕಿಟ್ ಖರೀದಿಗಾಗಿ ರೂ.80 ಕೋಟಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗೆ ಬಳಸಿಕೊಳ್ಳಲಾಗುತ್ತಿದೆ. ಒಟ್ಟಾರೆ. ಈ ಆರ್ಥಿಕ ವರ್ಷದಲ್ಲಿ ರಾಜ್ಯ ವಿಪತ್ತು ನಿಧಿಗೆ ರೂ.1054 ಕೋಟಿ ಮೀಸಲಿಡಲಾಗಿದೆ. ಇದರಲ್ಲಿ ಕೇಂದ್ರದ ಶೇ.75 ಅನುದಾನವಾದರೆ ರಾಜ್ಯದ ಪಾಲು ಶೇ.20 ಆಗುತ್ತದೆ. ಕೇಂದ್ರದಿಂದ ಮೊದಲ ಕಂತಾಗಿ ರೂ.395 ಕೋಟಿ ಬಿಡುಗಡೆಯಾಗಿದೆ. ಕಳೆದ ಸಾಲಿನ ಬಾಕಿ ಉಳಿದಿದ್ದ ರೂ.66 ಕೋಟಿ ಜೊತೆಗೆ ರೂ.90 ಕೋಟಿ ಕೊರೋನಾ ನಿರ್ವಹಣೆಗೆ ಈವರೆಗೆ ವೆಚ್ಚ ಮಾಡಲಾಗಿದೆ.

ಸಾಮಾನ್ಯವಾಗಿ ರಾಜ್ಯ ವಿಪತ್ತಿಗೆ ನಿಧಿಯನ್ನು ನೈಸರ್ಗಿಕ ವಿಪತ್ತು ಬಳಸಿಕೊಳ್ಳಲಾಗುತ್ತದೆ. ಕೊರೊನಾವನ್ನು ವಿಪತ್ತು ಎಂದು ಘೋಷಿಸಿರುವುದರಿಂದ ಅದರ ಹಣ ಬಳಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿತ್ತು. ಹಣ ಬಳಕೆಗೆ ಪರಿಷ್ಕೃತ ಮಾರ್ಗಸೂಚಿ ಕಳುಹಿಸಿದ್ದು, ಯಾವ ಕೆಲಸಕ್ಕೆ ಎಷ್ಟು ಬಳಸಬಹುದೆಂಬ ಮಿತಿಯನ್ನು ಹಾಕಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ: 14.05.2020